ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯದಂಡಾಧಿಕಾರಿಯವರ ನ್ಯಾಯಾಲಯ, ಪೊನ್ನಂಪೇಟೆ.

## ಕ್ರಿಮಿನಲ್ ಮೊಕದ್ದಮೆ ಸಂಖ್ಯೆ:1013/2021 .

ಫ್ರಾ.ಸಾ. :4
ಚಾ.ಸಾ. :4

| | | |
|---|---|---|
| ಹೆಸರು | : | ಅಬ್ದುಲ್ ಶಾಹದ್ |
| ತಂದೆಯ ಹೆಸರು | : | ಮೊಹಮ್ಮದ್ ಶರೀಫ್. |
| ವಯಸ್ಸು | : | 27 ವರ್ಷ |
| ಉದ್ಯೋಗ | : | ಖಾಸಗಿ |
| ವಿಳಾಸ | : | ವಿರಾಜಪೇಟೆ. |

... ...........................................................................................................

ದಿನಾಂಕ 5 ನೇ ಫೆಬ್ರವರಿ 2023 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ- ಮಾನ್ಯ ಸ ಸ ಅ ರವರಿಂದ : -

ಆರೋಪಿ 1 ಪರಿಚಯ. ಆರೋಪಿ 2 ಪರಿಚಯವಿಲ್ಲ. ಚಾಸಾ 1, 2, 3, ಪರಿಚಯ. ಅವರು ನಮ್ಮ ಜೊತೆ ಕೆಲಸ ಮಾಡುತ್ತಿದ್ದರು. ನಾನು 2021 ರಲ್ಲಿ ಗೋಣಿಕೊಪ್ಪ ಅಪೊಲೋ Formacy ಯಲ್ಲಿ ಕೆಲಸ ಮಾಡಿದ್ದೆ. ದಿಃ 11.05.2021 ರಲ್ಲಿ ಪೋಲೀಸ್ ಠಾಣೆಯಲ್ಲಿ ಸಹಿ ಮಡಿರುತ್ತೇನೆ ಸದರಿ ಸಹಿಯನು 2 ಬಿ ಎಂದು ಗುರುತಿಸಲಾಯಿತು. ಅಪೊಲೋ Formacy ಯಲ್ಲಿ ದರೋಡೆ ಆದ ಬಗ್ಗೆ ಸಹಿ ಮಾಡಿದ್ದೇನೆ. ಪೋಲಿಲಸರು ಈ ಬಗ್ಗೆ ವಿಚಾರಣೆ ಮಾಡಿದರು. ಸಾಕ್ಷಿಯು ಮತ್ತೊಂದು ನೋಡಿ ವಹುಜರನ್ನು ಅದನು 10 ಎಂದು , ಸಾಕ್ಷಿ ಸಹಿ 10 ಎ ಎಂದು ಗುರುತಿಸಲಾಯಿತು. ಮತ್ತೊಂದು ಪೋಟೋವನ್ನು ನಿಪಿ-11 ಎಂದು ಗುರುತಿಲಾಯಿತು.

(ಈ ಹಂತದಲ್ಲಿ ಸ.ಸ.ಅ.ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವಂತೆ ಕೋರಿಕೊಂಡ ಮೇರೆಗೆ ದಾಖಲೆಗಳನ್ನು ಪರಿಶೀಲಿಸಿ ಹಾಗೂ ಸ.ಸ.ಅ.ರವರ ವಾದವನ್ನು ಆಲಿಸಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು.)

ಪಾಟೀ ಸವಾಲು: - ಮಾನ್ಯ ಸ ಸ ಅ ರವರಿಂದ : -

ಪೋಲಿಸರು ಅಪೊಲೋ Formacy ಯಲ್ಲಿ ಮಹಜರು ಮಾಡಿ ವಿಡಿಯೋ ಇರುವ ಬಗ್ಗೆ ಪೆಂಡ್ರೈವ್ ಅನ್ನು ಅಮಾನತ್ತು ಪಡಿಸಿದರು ಎಂದರೆ ಸರಿ. ನಿಪಿ-10 ಕ್ಕೆ ಸಹಿಯನ್ನು ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿ. ನಿಪಿ-3 ಮತ್ತು 4 ನ್ನು ನೋಡಿ ಗುರುತಿಸುತ್ತಾರೆ.

<u>ಪಾಟೀ ಸವಾಲು</u> :- ಅರೋಪಿ ಪರ ವಕೀಲರವರಿಂದ :-

ಘಟನೆ ಅಯಿತು ಎಂದು ಹೇಳುವ ಸಮಯದಲ್ಲಿ ಅಪೊಲೋ Formacy ಗೆ ಸೇರಿ 1 ತಿಂಗಳು ಆಗಿತ್ತು. ಆಗ ವಿರೂಪಾಕ್ಷ ಅಲ್ಲಿ ಕೆಲಸ ಮಾಡುತಿರಲಿಲ್ಲ ಹಾಗೂ ಪರಿಚಯ ಇರಲಿಲ್ಲ ಎಂದರೆ ಸರಿಯಲ್ಲ. 2 ಬೀಗ ಓಪನ್ ಆಗಿತ್ತು. ಎಲ್ಲಾ ಕೀ ಗಳು ಯೋಗಣ್ಣ ರವರ ಬಳಿ ಇರುತ್ತಿತು. ಅವರೇ ಅಂಗಡಿ ಬಾಗಿಲನ್ನು ತೆರೆಯುತ್ತಿದ್ದರು ಹಾಗೂ ಮುಂಚುತ್ತಿದ್ದರು. ನಾನು ಆ ದಿನ ಬೆಳಿಗೆ 10.00 ಗಂಟೆ ಬಂದೆ ಯಾವುದೇ ಲಾಕರನ್ನು ಹೊಡೆದಿರಲಿಲ್ಲ. ನಾನು ಠಾಣೆಗೆ ದೂರು ಕೊಡಲು ಹೋಗಿರಲಿಲ್ಲ. ನಮ್ಮ ಅಂಗಡಿಯ ಮಾಲೀಕರು ಹೇಳಿದ ಕಾರಣ ಠಾಣೆಗೆ ಒಂದು ವಾರದ ನಂತರ ಹೋಗಿ ಸಹಿ ಮಾಡಿರುತ್ತೇನೆ. ಮಹಜರುಗಳನ್ನು ನಾನು ಓದಿರುವುದಿಲ್ಲ ಸಹಿ ಮಾಡಿರತ್ತೇನೆ. ದಿ:27.07.2022 ರಲ್ಲಿ ಠಾಣೆಗೆ ಹೋಗಿದ್ದೇನೆ ಎಂದರೆ ಸರಿ. ನಿಪಿ-11 ರ ಬೈಕ್ ಯಾರಿಗು ಸೇರಿದ್ದು ಎಂದು ಗೊತ್ತಿಲ್ಲ. ನಾನು ನಿಪಿ-10 ಅನ್ನು ಓದಿರುವುದಿಲ್ಲ. ಪೋಲೀಸರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ ಎಂದರೆ ಸರಿ. ಆರೋಪಿ 2 ರವರನ್ನು ಇದೇ ಮೊದಲ ಬಾರಿಗೆ ನೋಡಿರುತ್ತೇನೆ ಎಂದರೆ ಸರಿ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

<u>ಮರುವಿಚಾರಣೆ</u> :- - ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿಬೆರಳಚ್ಚು ಮಾಡಿಸಲಾಗಿರುತ್ತದೆ)

ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

Sdxxx-
ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.

(ಸಾಕ್ಷಿಯವರ ಸಹಿ)